## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ 434/2016 ಸಿ.ಡಬ್ಲ್ಯೂ –04 ಪಿ.ಡಬ್ಲ್ಯೂ -4

| | | |
|---|---|---|
| ಹೆಸರು | ಃ | ಶ್ರೀದೇವಿ |
| ತಂದೆಃ ಗಂಡ | ಃ | ಗುರುಶಾಂತಪ್ಪ |
| ವಯಸ್ಸು | ಃ | ೫೬ ವರ್ಷ |
| ಉದ್ಯೋಗ | : | ಮನೆಕೆಲಸ |
| ವಾಸಸ್ಥಳ | ಃ | ದೇವಂತಗಿ |

ದಿನಾಂಕಃ೧೨.೦೨.೨೦೨೪

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿತರ ಪರಿಚಯ ಇರುತ್ತದೆ. ಚಾಸಾ-1 ನನ್ನ ಗಂಡ, ಚಾಸಾ-5 ನನ್ನ ಮಗ, ಚಾಸಾ-2, 6 ರಿಂದ 9 ರವರ ಪರಿಚಯ ಇರುವುದಿಲ್ಲ.

ಆರೋಪಿತರು ಮತ್ತು ನಮ್ಮ ನಡುವೆ ಹಣಕಾಸಿನ ವ್ಯವಹಾರದ ಸಲುವಾಗಿ ನಮ್ಮ ಜಮೀನನ್ನು ಅಡಮಾನವಾಗಿಟ್ಟು ಹಣವನ್ನು ಪಡೆದುಕೊಂಡಿದ್ದೆವು. ಮಾತಿನ ಪ್ರಕಾರ ಮರಳಿ ಹಣವನ್ನು ನೀಡಿ ನಮ್ಮ ಜಮೀನನ್ನು ನಮಗೆ ಕೊಡುವ ಮಾತಾಗಿತ್ತು, ನಾವು ಹಣವನ್ನು ತೆಗೆದುಕೊಂಡು ಹೋಗಿ ಆರೋಪಿತರಿಗೆ ಕೊಡಲು ಹೋದಾಗ ಅವರು ಹಣವನ್ನು ಪಡೆದುಕೊಂಡಿರುವುದಿಲ್ಲ ಮತ್ತು ನಮ್ಮ ಜಮೀನನ್ನು ಬಿಟ್ಟುಕೊಟ್ಟಿರುವುದಿಲ್ಲ. ನಾವು ನಮ್ಮ ಜಮೀನಿನಲ್ಲಿ ಹೊಲದಲ್ಲಿ ಕೆಲಸ ಮಾಡುತ್ತಿರುವಾಗ ಜಮೀನು ನಮ್ಮದ್ದು ಅವರದ್ದು ಎಂದು ಹೇಳಿ ಹೊಡಪೆಟ್ಟು ಆಗಿರುತ್ತದೆ. ಚಾಸಾ-೧ ರವರಿಗೆ ಹೊಡೆಯುತ್ತಿದ್ದರು ನಾವು ಬಿಡಿಸಲು ಹೋದಾಗ ನನಗೂ ಹೊಡೆದಿರುತ್ತಾರೆ. ನಂತರ ಬಾಯಿ ಬಾಯಿ ಜಗಳವಾಗಿರುತ್ತದೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿ.17.10.2015 ರಂದು ನಾನು ಜಮೀನು ಸಾಗುವಳಿಗಾಗಿ ಗ್ರಾಮಕ್ಕೆ ಬಂದಾಗ, ರೂ.5,70,000/- ಗಳನ್ನು ಆರೋಪಿತರಿಗೆ ಕೊಡಲು ಹೋದಾಗ, ನಮ್ಮ ಜೊತೆಗೆ ಚಾಸಾ-೬, ೭ ರವರು ಇದ್ದರು ಎಂದರೆ ಸರಿ. ಚಾಸಾ-೧ ರವರು ಆರೋಪಿ ನಂ.೧ ರವರಿಗೆ ಬಡ್ಡಿ ಸಮೇತ ಹಣವನ್ನು ತೀರಿಸುತ್ತಿದ್ದೇವೆ, ನಮ್ಮ ಹೊಲ ನಮಗೆ ಬಿಡಿ ಎಂದು ಕೇಳಿದರು ಎಂದರೆ ಸರಿ. ಆರೋಪಿ ನಂ.೨ ಚಾಸಾ-೧ ರವರಿಗೆ ಹೊಲದ ವ್ಯವಹಾರ ಎಲ್ಲಾ ಮುಗಿದಿದೆ ಎಂದು ಅವಾಚ್ಯವಾಗಿ ಬೈದ್ದು ಬೆನ್ನು ಬಗ್ಗಿಸಿ ಹೊಡೆದಿರುತ್ತಾನೆ ಎಂದರೆ ಸರಿ. ನಾನು ಬಿಡಿಸಲು ಹೋದಾಗ ನನ್ನ ಸೀರೆ ಎಳೆದು ಅವಮಾನಪಡಿಸಿರುತ್ತಾನೆ ಎಂಥರೆ ಸರಿ. ಆರೋಪಿ ನಂ.೧ ಈ ಹಾಟ್ಯಾನದು ಬಹಳ ಆಗಿದೆ ಬಿಡಬೇಡಿರಿ ಎಂಥು ಹೇಳಿದಳು ಎಂದರೆ ಸರಿ. ಆರೋಪಿ ನಂ.೩ ಕೈಯಲ್ಲಿದ್ದ ಕುರುಪಿಯನ್ನು ಚಾಸಾ-೧ ರವರ ಕಡೆಗೆ ಬೀಸಿ ಒಗೆದಳು, ಅದು ಚಾಸಾ-೬ ರವರ ಕಾಲಿಗೆ ತಾಗಿತು ಎಂದರೆ ಸರಿ. ಚಾಸಾ-೭

ರವರಿಗೆ ಆರೋಪಿ ನಂ.೪ ಮತ್ತು ೫ ರವರು ತಡೆದು ನಿಲ್ಲಿಸಿದರು ಎಂದರೆ ಸರಿ. ಆರೊಪಿ ನಂ.೭ ರವರು ಸದರಿ ಕುರುಪಿಯನ್ನು ತೆಗೆದುಕೊಂಡು ಚಾಸಾ-7 ರವರಿಗೆ ಹೊಡೆದಿರುತ್ತಾನೆ ಎಂದರೆ ಸರಿ. ಚಾಸಾ-5 ರವರು ಬಿಡಿಸಲು ಹೋದಾಗ ಆರೊಪಿ ನಂ.೮ ಮತ್ತು ೯ ರವರು ತಡೆದು ನಿಲ್ಲಿಸಿ ಬೆನ್ನ ಮೆಲೆ ಮತ್ತು ಕಪಾಳದ ಮೇಲೆ ಹೊಡೆದಿರುತ್ತಾರೆ ಎಂದರೆ ಸರಿ. ಚಾಸಾ-8 ರಿಂದ 10 ರವರು ಸದರಿ ಜಗಳ ಬಿಡಿಸಿರುತ್ತಾರೆ ಎಂದರೆ ಸರಿ. ನಾನು ಈ ರೀತಿಯಾಗಿ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂಧರೆ ಸರಿ.

## ಪಾಟೀ ಸವಾಲು ಆರೋಪಿತರ ಪರ ಶ್ರೀ ಬಿ.ಎ.ಡಿ. ವಕೀಲರಿಂದ

ಸ್ನೇಹಾ ಮತ್ತು ಸ್ವಪ್ನಾ ನನ್ನ ಮಕ್ಕಳು ಎಂದರೆ ಸರಿ. ಸದರಿ ಸ್ನೇಹಾ ಮತ್ತು ಸ್ವಪ್ನಾ ನನ್ನ ಮೇಲೆ, ಚಾಸಾ-೧, ೫ ರವರ ಮೇಲೆ ಪಾಲು ವಾಟ್ನಿ ದಾವೆಯನ್ನು ಹೂಡಿರುತ್ತಾರೆ ಎಂಧರೆ ಸರಿ. ಸದರಿ ದಾವೆಯಲ್ಲಿ ಆರೊಪಿ ನಂ.೧ರವರ ಹೆಸರಿನಲ್ಲಿರುವ ಜಮೀನಲ್ಲಿಯೂ ಸಹ ಪಾಲು ವಾಟ್ನಿ ಕೇಳಿದರು ಎಂದರೆ ಸರಿ. ಆರೋಪಿ ನಂ.೧ರವರು ನನ್ನ ಮೇಲೆ, ಚಾಸಾ-೧ ಮತ್ತು ಚಾಸಾ-೫ ರವರ ಮೇಲೆ ದಾವೆಯನ್ನು ಹೂಡಿದ್ದಳು ಎಂದರೆ ಸರಿ. ಸದರಿ ದಾವೆಯು ಮಹಾದೇವಿ ಪರವಾಗಿರುತ್ತದೆ. ಮತ್ತು ನನ್ನ ಮಕ್ಕಳಾದ ಸ್ನೇಹಾ ಮತ್ತು ಸ್ವಪ್ನಾ ಇವರು ಮಾಡಿದ ದಾವೆಯು ಭಾಗಶಃ ಡಿಕ್ರಿ ಆಗಿರುತ್ತದೆ ಎಂದರೆ ಸರಿ. ಸದರಿ ಆದೇಶದ ವಿರುದ್ದ ಚಾಸಾ-೧, ನನ್ನ ಮಕ್ಕಳಾದ ಸ್ನೇಹಾ ಮತ್ತು ಸ್ವಪ್ನಾ ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಆದೇಶವನ್ನು ನಾವೂ ಮನಃಪೂರ್ವಕವಾಗಿ ಒಪ್ಪಲಿಲ್ಲ ಎಂದರೆ ಸರಿ. ಸದರಿ ಚಾಸಾ-೧ ರವರು ಸದರಿ ಒಪ್ಪದ ಕಾರಣಕ್ಕಾಗಿ ಈ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಹಣವನ್ನು ನಾವು ಅವರ ಮನೆಗೆ ಕೊಡಲು ಹೋಗಿದ್ದೆವು, ಅವರು ತೆಗೆದುಕೊಂಡಿರಲಿಲ್ಲ. ಘಟನೆ ನಡೆದಿದೆ ಎಂದು ಹೇಳುವ ದಿನಾಂಕದ ೧೫ ದಿನ ಮೊದಲು ನಾವು ಹಣವನ್ನು ಕೊಡಲು ಹೋಗಿದ್ದೆವು. ಸದರಿ ಹಣವನ್ನು ಕೊಡಲು ನಾನು ಹೋಗಿರುವುದಿಲ್ಲ, ಚಾಸಾ-೧, ೫, ನಮ್ಮ ಅಳಿಯ ಮತ್ತು ಹಿರಿಯರು ಹೋಗಿದ್ದರು.

ಚಾಸಾ-೧ ಮತ್ತು ೫ ರವರು ಹಣವನ್ನು ತೆಗೆದುಕೊಂಡಿಲ್ಲ ಎಂದು ಹೇಳಿ ನೋಟಿಸನ್ನು ಆರೋಪಿತರಿಗೆ ಕೊಟ್ಟಿದ್ದರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಘಟನೆ ನಡೆದಿದೆ ಎಂದು ಹೇಳುತ್ತಿರಲ್ಲ, ಆಗ ಸಮಯ ಎಷ್ಟು ಆಗಿತ್ತು ಎಂದರೆ ಸಾಕ್ಷಿ ಮಧ್ಯಾಹ್ನ ಸಮಯ ಆಗಿತ್ತು ನಿಖರವಾಗಿ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಮಧ್ಯಾಹ್ನ ಸಮಯದಲ್ಲಿ ಆಜು ಬಾಜು ಜಮೀನಿನಲ್ಲಿ ಸಾಕಷ್ಟು ಜನರು ಇದ್ದರು ಎಂದರೆ ಸರಿ. ಘಟನೆ ೨-೩ ಗಂಟೆವರೆಗೂ ನಡೆದಿರುತ್ತದೆ. ಪೋಲಿಸರು ಘಟನಾ ಸ್ಥಳಕ್ಕೆ ವಾಹನವನ್ನು ತೆಗೆದುಕೊಂಡು ಬಂದಿರುತ್ತಾರೆ. ಪೋಲಿಸರು ಬಂದಾಗ ಇನ್ನೂ ಸ್ವಲ್ಪ ಬೆಳಕು ಇತ್ತು. ಆರೋಪಿತರನ್ನು ಮತ್ತು ನಮ್ಮನ್ನು ಸಹ ಠಾಣೆಗೆ ಕರೆದುಕೊಂಡು ಹೋಗಿರುತ್ತಾರೆ ಹೆಣ್ಣು ಮಕ್ಕಳನ್ನು ಕರೆದುಕೊಂಡು ಹೋಗಿರುವುದಿಲ್ಲ. ಪೋಲಿಸರು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ನನಗೆ ಏನು ಕೇಳಿರುವುದಿಲ್ಲ, ಗಂಡು ಮಕ್ಕಳನ್ನು ಕೇಳಿರುತ್ತಾರೆ, ನಾನು ಸಹ ಕೂಡ ಮಾಹಿತಿಯನ್ನು ಹೇಳಿರುವುದಿಲ್ಲ.

ಯಾವುದೇ ಘಟನೆ ನಡೆಯದಿದ್ದರೂ ಚಾಸಾ-೧ ರವರು ಸದರಿ ಜಮೀನಿನ ಆದೇಶ ಆರೋಪಿತರ ಪರ ಆದ ಕಾರಣ ಆರೋಪಿತರ ವಿರುದ್ದ ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿರುತ್ತಾರೆ, ಅದಕ್ಕೆ ಪೂರಕವಾಗಲಿ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

ಆರೋಪಿತರು ಮತ್ತು ನಮ್ಮ ನಡುವೆ ಹಣಕಾಸಿನ ವ್ಯವಹಾರದ ಸಲುವಾಗಿ ನಮ್ಮ ಜಮೀನನ್ನು ಅಡಮಾನವಾಗಿಟ್ಟು ಹಣವನ್ನು ಪಡೆದುಕೊಂಡಿದ್ದೆವು ಮಾತಿನ ಪ್ರಕಾರ ಮರಳಿ ಹಣವನ್ನು ನೀಡಿ ನಮ್ಮ ಜಮೀನನ್ನು ನಮಗೆ ಕೊಡುವ ಮಾತಾಗಿತ್ತು, ನಾವು ಹಣವನ್ನು ತೆಗೆದುಕೊಂಡು ಹೋಗಿ ಆರೋಪಿತರಿಗೆ ಕೊಡಲು ಹೋದಾಗ ಅವರು ಹಣವನ್ನು ಪಡೆದುಕೊಂಡಿರುವುದಿಲ್ಲ ಮತ್ತು ನಮ್ಮ ಜಮೀನನ್ನು ಬಿಟ್ಟುಕೊಟ್ಟಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ನಾವು ನಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಿರುವಾಗ ಜಮೀನು ನಮ್ಮದ್ದು ಅವರದ್ದು ಎಂದು ಹೇಳಿ ಹೊಡಪೆಟ್ಟು ಆಗಿರುತ್ತದೆ, ಚಾಸಾ-೧ ರವರಿಗೆ ಹೊಡೆಯುತ್ತಿದ್ದರು ನಾವು ಬಿಡಿಸಲು ಹೋದಾಗ ನನಗೂ ಹೊಡೆದಿರುತ್ತಾರೆ, ನಂತರ ಬಾಯಿ ಬಾಯಿ ಜಗಳವಾಗಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

ದಿ.17.10.2015 ರಂದು ನಾನು ಜಮೀನು ಸಾಗುವಳಿಗಾಗಿ ಗ್ರಾಮಕ್ಕೆ ಬಂದಾಗ, ರೂ.5,70,000/- ಗಳನ್ನು ಆರೋಪಿತರಿಗೆ ಕೊಡಲು ಹೋದಾಗ, ನಮ್ಮ ಜೊತೆಗೆ ಚಾಸಾ-೬, ೭ ರವರು ಇದ್ದರು, ಚಾಸಾ-೧ ರವರು ಆರೋಪಿ ನಂ.೧ ರವರಿಗೆ ಬಡ್ಡಿ ಸಮೇತ ಹಣವನ್ನು ತೀರಿಸುತ್ತಿದ್ದೇವೆ, ನಮ್ಮ ಹೊಲ ನಮಗೆ ಬಿಡಿ ಎಂದು ಕೇಳಿದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆರೋಪಿ ನಂ.೨ ಚಾಸಾ-೧ ರವರಿಗೆ ಹೊಲದ ವ್ಯವಹಾರ ಎಲ್ಲಾ ಮುಗಿದಿದೆ ಎಂದು ಅವಾಚ್ಯವಾಗಿ ಬೈದ್ದು ಬೆನ್ನು ಬಗ್ಗಿಸಿ ಹೊಡೆದಿರುತ್ತಾನೆ, ನಾನು ಬಿಡಿಸಲು ಹೋದಾಗ ನನ್ನ ಸೀರೆ ಎಳೆದು ಅವಮಾನಪಡಿಸಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆರೋಪಿ ನಂ.೧ ಈ ಹಾಟ್ಯಾನದು ಬಹಳ ಆಗಿದೆ ಬಿಡಬೇಡಿರಿ ಎಂಧು ಹೇಳಿದಳು, ಆರೋಪಿ ನಂ.೩ ಕೈಯಲ್ಲಿದ್ದ ಕುರುಪಿಯನ್ನು ಚಾಸಾ-೧ ರವರ ಕಡೆಗೆ ಬೀಸಿ ಒಗೆದಳು, ಅದು ಚಾಸಾ-೬ ರವರ ಕಾಲಿಗೆ ತಾಗಿತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಚಾಸಾ-೭ ರವರಿಗೆ ಆರೋಪಿ ನಂ.೪ ಮತ್ತು ೫ ರವರು ತಡೆದು ನಿಲ್ಲಿಸಿದರು, ಆರೊಪಿ ನಂ.೭ ರವರು ಸದರಿ ಕುರುಪಿಯನ್ನು ತೆಗೆದುಕೊಂಡು ಚಾಸಾ-7 ರವರಿಗೆ ಹೊಡೆದಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಚಾಸಾ-5 ರವರು ಬಿಡಿಸಲು ಹೋದಾಗ ಆರೊಪಿ ನಂ.೮ ಮತ್ತು ೯ ರವರು ತಡೆದು ನಿಲ್ಲಿಸಿ ಬೆನ್ನ ಮೆಲೆ ಮತ್ತು ಕಪಾಳದ ಮೇಲೆ ಹೊಡೆದಿರುತ್ತಾರೆ, ಚಾಸಾ-8 ರಿಂದ 10 ರವರು ಸದರಿ ಜಗಳ ಬಿಡಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ